**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ,**
**ಬೆಂಗಳೂರು-560 001**

ಸಂಖ್ಯೆ::ಸಿ8[4]ಶಾಶಿಅ.ಸೇವಾ ಭದ್ರತೆ/118/2008-09 ದಿನಾಂಕ: 09.10.2017

**ಸುತ್ತೋಲೆ**

ವಿಷಯ: ಕರ್ನಾಟಕ ಶಿಕ್ಷಣ ಸಂಸ್ಥೆ (ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತುಗಳು ಮತ್ತು ನಿಬಂಧನೆಗಳು) ನಿಯಮಗಳ 2005ರ ಪ್ರಕಾರ ಅನುದಾನ ರಹಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರುಗಳ ಸೇವಾ ಭದ್ರತೆ ಬಗ್ಗೆ.

ಉಲ್ಲೇಖ:1] ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 104 ಎಸ್.ಇ.ಪಿ.2005, ದಿನಾಂಕ: 12.01.2006.

2] ಸರ್ಕಾರದ ಪತ್ರ ಸಂಖ್ಯೆ: ಇಡಿ 113 ವಿವಿಧ 2005, ದಿನಾಂಕ: 02.11.2006.

3] ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 249 ಎಸ್ಇಎಸ್ 2013,ದಿ: 19.05.2015.

4] ಸರ್ಕಾರದ ಪತ್ರ ಸಂಖ್ಯೆ: ಇಡಿ 249 ಎಸ್ಇಎಸ್ 2013, ದಿನಾಂಕ: 05.01.2017.

5] ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ: 31.08.2016.

******

ಉಲ್ಲೇಖ (1)ರ ಸರ್ಕಾರದ ಪತ್ರದಲ್ಲಿ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಸಂಬಳವನ್ನು ಚೆಕ್ ಮೂಲಕ ಪಾವತಿಸುವ ನಿಯಮವನ್ನು ಕಡ್ಡಾಯಗೊಳಿಸಲಾಗಿದೆ. ಅದರಂತೆ, ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪ ನಿರ್ದೇಶಕರುಗಳಿಂದ ಮಾಹಿತಿ ಪಡೆಯಲಾಗಿ ಇಲ್ಲಿಯವರೆಗೆ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸದೇ ಇರುವುದು ಕಂಡುಬಂದಿದೆ. ಈ ವಿಚಾರದಲ್ಲಿ ದಿನಾಂಕ: 27.09.2017ರಂದು ವಿಧಾನ ಪರಿಷತ್ ಭರವಸೆ ಸಮಿತಿಯ ಸಭೆಯಲ್ಲಿ ವಿಚಾರ ಪ್ರಸ್ತಾಪವಾಗಿದ್ದು, ಪೂರ್ಣ ಪ್ರಮಾಣದ ಸಾಧನೆ ಮಾಡುವಂತೆ ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಾನ್ಯತೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005, ದಿನಾಂಕ: 02.11.2006ರ ಪ್ರಕಾರ ಮಾನ್ಯತೆ ನವೀಕರಣ ಸಂದರ್ಭದಲ್ಲಿ ಉಲ್ಲೇಖ(1)ರ ಸರ್ಕಾರದ ಆದೇಶದ ಪ್ರಕಾರ ಸಂಬಂಧಿಸಿದ ಸಿಬ್ಬಂದಿ ನೌಕರರಿಗೆ ಕನಿಷ್ಠ ವೇತನವನ್ನು ಬ್ಯಾಂಕ್ ಮೂಲಕ ಪಾವತಿಸಲಾಗುತ್ತಿದೆಯೇ; ಮತ್ತು ಇತರೆ ಸೇವಾ ಸೌಲಭ್ಯಗಳನ್ನು ನೀಡಲಾಗುತ್ತಿದೆಯೇ; ಎಂಬ ಬಗ್ಗೆ ಸಂಬಂಧಿಸಿದ ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರ ಪಡೆದು ನವೀಕರಿಸತಕ್ಕದೆಂದು ಉಲ್ಲೇಖ(3)ರ ಸುತ್ತೋಲೆಯಲ್ಲಿ ಸೂಚಿಸಲಾಗಿತ್ತು.

ಆದರೆ, ಸರ್ಕಾರದಿಂದ ಅಧಿಸೂಚನೆ ಹೊರಡಿಸಿ, ಸುಮಾರು ವರ್ಷಗಳು ಸಂದರೂ ಸಹ ಈ ನಿಯಮಗಳನ್ನು ಸಮರ್ಪಕವಾಗಿ ಜಾರಿ ಮಾಡಿರುವುದಿಲ್ಲ.

ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 88ರಲ್ಲಿ ಸಿಬ್ಬಂದಿ ನೇಮಕಾತಿ ಬಗ್ಗೆ ಪ್ರಸ್ತಾಪಿಸಿದೆ. ಅದರಂತೆ, ನೇಮಕಾತಿ ಮಾಡಿಕೊಂಡ ಎಲ್ಲಾ ಸಿಬ್ಬಂದಿಗಳಿಗೆ ವೇತನ ಪಾವತಿ ಬಗ್ಗೆ ಕಲಂ 89ರಲ್ಲಿ ಮತ್ತು ಸೇವಾ ವಿವರವನ್ನು ಕಾಯ್ದಿರಿಸುವ ಬಗ್ಗೆ ಕಲಂ 90ರಲ್ಲಿ ಸ್ಪಷ್ಟ ಪಡಿಸಿದೆ. ಈ ನಿಯಮಗಳನ್ನು ಉಲ್ಲಂಘಿಸಿ ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಿಬ್ಬಂದಿಗಳಿಗೆ ಸೇವಾ ಸೌಲಭ್ಯಗಳನ್ನು ಒದಗಿಸಲು ವಿಫಲವಾದಂತಹ ಆಡಳಿತ ಮಂಡಳಿಗಳ ವಿರುದ್ಧ DERA (ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ) ರವರ ಗಮನಕ್ಕೆ ತರುವ ಮೂಲಕ ನಿಯಮಾನುಸಾರ ಮುಕ್ತ ಅವಕಾಶವನ್ನು ಕಲ್ಪಿಸಿ ತದನಂತರವೂ ವಿಫಲವಾದಲ್ಲಿ ರೂ.5.00 ಲಕ್ಷಗಳ ದಂಡವನ್ನು ನಿಯಮಾನುಸಾರ ವಿಧಿಸಲು ಕರ್ನಾಟಕ ಶಿಕ್ಷಣ ಕಾಯ್ದೆ 1983ರ ಕಲಂ 125-ಎ ರ ತಿದ್ದುಪಡಿಯಲ್ಲಿ ಪ್ರಸ್ತಾಪಿಸಿದೆ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ DERA (ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ) ದಲ್ಲಿ **ಸೇವಾ ಭದ್ರತೆ ಕಲ್ಪಿಸದೆ ಇರುವಂತಹ ಆಡಳಿತ ಮಂಡಳಿಗಳ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿರುತ್ತವೆ. ಈ ಪ್ರಕರಣಗಳ ಪ್ರಸ್ತುತ ಹಂತದ**

**ವಿವರಗಳನ್ನು ಸಲ್ಲಿಸುವುದಲ್ಲದೆ** ಮೇಲ್ಕಂಡ ಶಿಕ್ಷಣ ಕಾಯಿದೆ ತಿದ್ದುಪಡಿ ನಿಯಮಗಳನ್ವಯ ಆಯಾ ಜಿಲ್ಲಾ ಉಪನಿರ್ದೇಶಕರು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಸಹ ತಿಳಿಸಿದೆ.

ಮುಂದುವರೆದು ಉಲ್ಲೇಖ-5ರ ದಿನಾಂಕ:11.01.2017ರ ಪತ್ರದಲ್ಲಿ ಈ ವಿಚಾರಕ್ಕೆ ಸಂಬಂದಿಸಿದಂತೆ ಸ್ಪಷ್ಟ ನಿರ್ದೇಶನ ನೀಡಿದ ತರುವಾಯ ಮೇಲ್ಕಂಡ ಉಲ್ಲೇಖ-1ರ ಸರ್ಕಾರದ ಆದೇಶದ ಅನ್ವಯ ಸೇವಾ ಭದ್ರತೆ ಕಲ್ಪಿಸದೆ ಇರುವಂತಹ ಸಂಸ್ಥೆಗಳಿಗೆ ಕರ್ನಾಟಕ ಶಿಕ್ಷಣ ಕಾಯಿದೆ-1983ರ ಕಲಂ-39ರಡಿಯಲ್ಲಿ ಶಾಲೆ ಮಾನ್ಯತೆಯನ್ನು ಏಕೆ ಹಿಂಪಡೆಯಬಾರದು ಎಂಬ ಬಗ್ಗೆ ಸೇವಾ ಭದ್ರತೆ ಕಲ್ಪಿಸದ ಶಾಲಾ ಆಡಳಿತ ಮಂಡಳಿಗಳ ವಿರುದ್ಧ ನೋಟೀಸ್ ಜಾರಿ ಮಾಡಲು ಸೂಚಿಸಲಾಗಿತ್ತು. **ಸೇವಾ ಭದ್ರತೆ ಕಲ್ಪಿಸದ ಆಡಳಿತ ಮಂಡಳಿಗಳ ವಿರುದ್ಧ ಕಾರಣ ಕೇಳುವ ನೋಟೀಸ್ ಜಾರಿ ಮಾಡಿದ ಶಾಲೆಗಳ ವಿವರಗಳನ್ನು ಹಾಗೂ ತದ ನಂತರದ ಪ್ರಗತಿ ವಿವರಗಳನ್ನು ಸಲ್ಲಿಸುವುದರ ಜೊತೆಗೆ ನೋಟೀಸ್ ಜಾರಿ ಮಾಡಿದ ತರುವಾಯ ಉಪ ನಿರ್ದೇಶಕರ ಹಂತದಿಂದ ಕೈಗೊಂಡ ಕ್ರಮದ ವಿವರಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು ಹಾಗೂ ಈ ಕಛೇರಿ ಹಂತದಲ್ಲಿ ಸದರಿ ಸಂಸ್ಥೆಗಳ ವಿರುದ್ಧ ಕೈಗೊಳ್ಳಬೇಕಾದ ಕ್ರಮದ ಕುರಿತು ಸ್ಪಷ್ಟ ಅಭಿಪ್ರಾಯದ ವರದಿಯನ್ನು ಸಹ ಸಲ್ಲಿಸಲು ತಿಳಿಸಿದೆ.**

ಮುಂದುವರೆದು, ಸಪ್ಟೆಂಬರ್ 2017ಕ್ಕೆ ಅಂತ್ಯಗೊಂಡಂತೆ ಈ ಕಛೇರಿ ವತಿಯಿಂದ ಈಗಾಗಲೇ ನೀಡಿರುವ ನಿಗದಿತ 19 ಅಂಶಗಳ ನಮೂನೆಯಂತೆ ಪೂರ್ಣ ಪ್ರಮಾಣದ ಮಾಹಿತಿಯನ್ನು ಸಿದ್ಧಪಡಿಸಿ, ಪ್ರತ್ಯೇಕವಾಗಿ ಪ್ರಾಥಮಿಕ ವಿಭಾಗಕ್ಕೆ ಸಂಬಂಧಪಟ್ಟ ಮಾಹಿತಿಯನ್ನು prydirector.edu.sgkar@kar.nic.in ಹಾಗೂ ಪ್ರೌಢಶಾಲಾ ವಿಭಾಗಕ್ಕೆ ಸಂಬಂಧಪಟ್ಟ ಮಾಹಿತಿಯನ್ನು giaest2@gmail.com ಇ-ಮೇಲ್ ವಿಳಾಸಕ್ಕೆ **MS-Excel ನುಡಿ ಅಕ್ಷರ ಫಾಂಟ್‌ನಲ್ಲಿ ಈ ಕಚೇರಿಗೆ ದಿನಾಂಕ:15.10.2017 ರೊಳಗೆ ಕಡ್ಡಾಯವಾಗಿ ತಪ್ಪದೆ ಕಳುಹಿಸತಕ್ಕದ್ದು.** ಮೇಲ್ಕಂಡ ಎಲ್ಲಾ ಮಾಹಿತಿ ನಿಗದಿತ ಅವಧಿಯಲ್ಲಿ ನಿಗದಿತ ನಮೂನೆಯಲ್ಲಿ ಬಾರದಿದ್ದಲ್ಲಿ ಅಥವಾ ಸಲ್ಲಿಸುವ ಮಾಹಿತಿಯಲ್ಲಿ ತಪ್ಪು, ವ್ಯತ್ಯಾಸ, ನ್ಯೂನತೆಗಳಿದ್ದಲ್ಲಿ .ಸಂಬಂದಿಸಿದ ಉಪ ನಿರ್ದೇಶಕರನ್ನೇ ಪೂರ್ಣ ಜವಾಬ್ದಾರರನ್ನಾಗಿ ಮಾಡಲಾಗುವುದು ಎಂದು ಮತ್ತೊಮ್ಮೆ ತಿಳಿಸಿದೆ.

ನಿರ್ದೇಶಕರು[ಪ್ರೌಢ ಶಿಕ್ಷಣ]

ಇವರಿಗೆ:

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ],ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಸೂಕ್ತ ಕ್ರಮಕ್ಕಾಗಿ.
2. ಬೆಂಗಳೂರು ಮತ್ತು ಮೈಸೂರು ವಿಭಾಗದ ಸಹ ನಿರ್ದೇಶಕರಿಗೆ -ಸೂಕ್ತ ಕ್ರಮಕ್ಕಾಗಿ

ಪ್ರತಿಯನ್ನು:-

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, [ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ] 6ನೇ ಮಹಡಿ, ಬಹು ಮಹಡಿಗಳ ಕಟ್ಟಡ, ಬೆಂಗಳೂರು-560001. ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.